## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 110
ಮಾನ್ಯ ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ
ಉತ್ತರಿಸಬೇಕಾದ ದಿನಾಂಕ : 02.03.2020
ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | 2017-18, 2018-19 ಮತ್ತು 2019-20ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಪಡೆದ ಅನುದಾನ ಎಷ್ಟು; ಯಾವ ಯಾವ ಯೋಜನೆಗಳಿಗೆ ಇದನ್ನು ಉಪಯೋಗಿಸಲಾಗಿದೆ; ಅನುದಾನ ಬಳಕೆಯಾಗದೇ ಇರುವ ಯೋಜನೆಗಳು ಯಾವುವು?(ವಿವರ ನೀಡುವುದು). | 2017-18, 2018-19 ಮತ್ತು 2019-20ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಪಡೆದ ಅನುದಾನ, ವಿನಿಯೋಗ ಹಾಗೂ ಉಳಿಕೆಯ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಆರೋಗ್ಯ ಇಲಾಖೆಯ ಅನುದಾನ ಬಳಕೆಯಿಂದ ಆರೋಗ್ಯ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯೇನು; ಸಾಮಾನ್ಯರಿಗೆ ಆರೋಗ್ಯದಲ್ಲಿ ಉಂಟಾದ ಬದಲಾವಣೆಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಒಟ್ಟು 452 ಖಾಸಗಿ ಆಸ್ಪತ್ರೆಗಳು, 2807 ಸರ್ಕಾರಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಈವರೆಗೆ ಒಟ್ಟು 4,81,372 ಫಲಾನುಭವಿಗಳಿಗೆ ರೂ.613.00 ಕೋಟಿ ವೆಚ್ಚದಲ್ಲಿ ಚಿಕಿತ್ಸೆ ನೀಡಲಾಗಿದೆ.<br><br>ಅಂಗಾಂಗ ಕಸಿ ಯೋಜನೆಯಡಿಯಲ್ಲಿ ಪ್ರಸಕ್ತ ವರ್ಷದಲ್ಲಿ ಒಟ್ಟು 22 ಫಲಾನುಭವಿಗಳಿಗೆ ರೂ.72.00 ಲಕ್ಷಗಳ ಸಹಾಯಧನ ನೀಡಲಾಗಿದೆ.<br><br>ಸರ್ಕಾರಿ ನೌಕರರಿಗೆ ಜ್ಯೋತಿ ಸಂಜೀವಿನಿ ಯೋಜನೆಯಡಿಯಲ್ಲಿ ಹೆಚ್ಚುವರಿ ಸೌಲಭ್ಯ ನೀಡುವ ಹಾಗೂ ನಿವೃತ್ತ ಸರ್ಕಾರಿ ನೌಕರರಿಗೆ ನಗದು ರಹಿತ ಆರೋಗ್ಯ ಯೋಜನೆಯನ್ನು ಜಾರಿಗೆ ತರುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br><br>ತಾಯಿ ಮರಣ ಪ್ರಮಾಣವನ್ನು ತಗ್ಗಿಸುವಲ್ಲಿ ಕರ್ನಾಟಕವು ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. 2016ರಲ್ಲಿ ಪ್ರತಿ ಲಕ್ಷ ಜೀವಂತ ಜನನಕ್ಕೆ ಇದ್ದಂತಹ ಮರಣ ಪ್ರಮಾಣವನ್ನು 108 ರಿಂದ 97ಕ್ಕೆ ಇಳಿಸಿ ರಾಷ್ಟ್ರದ ಗಮನ ಸೆಳೆದಿದೆ.<br><br>ಪ್ರಸ್ತುತ, 1429 ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ಪ್ರಾರಂಭಿಸಲಾಗಿದ್ದು, 2020ನೇ ಸಾಲಿನಲ್ಲಿ ಒಟ್ಟು 2032 ಉಪ ಕೇಂದ್ರಗಳನ್ನು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಉನ್ನತೀಕರಿಸಲಾಗುವುದು. |

Scanned by CamScanner

| | | |
|---|---|---|
| | | ರಾಜ್ಯದ 5 ಜಿಲ್ಲೆಗಳಲ್ಲಿ ಮಿಷನ್ ಇಂದ್ರ ಧನುಷ್ ಕಾರ್ಯಕ್ರಮದ ಉತ್ತಮ ಕಾರ್ಯನಿರ್ವಹಣೆಗೆ ಹಾಗೂ ರಾಜ್ಯದಲ್ಲಿ ಶಾಲಾ ಲಸಿಕಾ ಕಾರ್ಯಕ್ರಮಕ್ಕೆ (TD) ಕೇಂದ್ರ ಸರ್ಕಾರದಿಂದ ಪ್ರಶಂಸೆ ದೊರೆತಿದೆ.<br><br>ಆಯುಷ್ ಔಷಧಗಳ ಗುಣಮಟ್ಟ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಭಾರತ ಸರ್ಕಾರದ ನೆರವಿನೊಂದಿಗೆ ಬೆಂಗಳೂರಿನಲ್ಲಿ Peripheral Pharmaco vigilance Centre ನ್ನು ಪ್ರಾರಂಭಿಸಲಾಗಿದೆ.<br><br>ಕೇಂದ್ರ ಸರ್ಕಾರದ ನೆರವಿನೊಂದಿಗೆ ರಾಷ್ಟ್ರೀಯ ಆಯುಷ್ ಮಿಷನ್ ಯೋಜನೆಯಡಿ ಗದಗ ಮತ್ತು ಮಂಗಳೂರು ನಗರಗಳಲ್ಲಿ 50 ಹಾಸಿಗೆಗಳ ಆಯುಷ್ ಸಂಯುಕ್ತ ಆಸ್ಪತ್ರೆಗಳನ್ನು ಪ್ರಾರಂಭಿಸಲಾಗಿದೆ. |
| ಇ) | ಆರೋಗ್ಯ ಇಲಾಖೆಯಲ್ಲಿ ಅನುದಾನ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಎಷ್ಟು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು). | ಬಂದಿದೆ,<br>ತೆಗೆದುಕೊಂಡ ಕ್ರಮದ ಬಗ್ಗೆ ಅನುಬಂಧ-2ರಲ್ಲಿ ಮಾಹಿತಿ ನೀಡಲಾಗಿದೆ. |
| ಈ) | ಆರೋಗ್ಯ ಇಲಾಖೆಯಲ್ಲಿ ವೈದ್ಯರುಗಳು ಕರ್ತವ್ಯ ಲೋಪ ಎಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | |

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

Scanned by CamScanner

ಅನುಬಂಧ-1

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

### 1. ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನದ ಬಗ್ಗೆ ಮಾಹಿತಿ (60:40%)

(ರೂ.ಕೋಟಿಗಳಲ್ಲಿ)

| ಯೋಜನೆಯ ಹೆಸರು | ಅವಧಿ | ಅನುಮೋದಿತ ಅನುದಾನ | ಆರಂಭಿಕ ಶಿಲ್ಕು | ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ | ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ | ಒಟ್ಟು ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಉಳಿಕೆಯಾದ ಅನುದಾನ |
|---|---|---|---|---|---|---|---|---|
| | | ಅ | ಆ | ಇ | ಈ | ಉ=(ಆ+ಇ+ಈ) | ಊ | ಋ |
| ರಾಷ್ಟ್ರೀಯ ಆರೋಗ್ಯ ಅಭಿಯಾನ | 2017-18 | 1856.51 | 865.35 | 702.89 | 734.28 | 2302.52 | 1494.84 | 831.22 |
| | 2018-19 | 2150.17 | 831.22 | 681.00 | 738.18 | 2250.40 | 1401.59 | 902.49 |
| | 2019-20 (ಜನವರಿ ಅಂತ್ಯಕ್ಕೆ) | 1100.00 | 902.49 | 494.67 | 457.80 | 1854.96 | 1315.16 | 539.80 |
| *ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ | 2017-18 | 183.62 | 117.96 | 51.21 | 40.59 | 209.77 | 122.27 | 87.50 |
| | 2018-19 ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆ | 113.62 | 89.34 | 0.00 | 56.81 | 146.15 | 71.28 | 74.87 |
| | ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ | 765.00 | 66.04 | 159.31 | 765.00 | 990.35 | 471.43 | 518.92 |
| | 2019-20 (ಜನವರಿ ಅಂತ್ಯಕ್ಕೆ) ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆ | 0.00 | 78.79 | 0.00 | 0.00 | 78.79 | 1.63 | 77.16 |
| | ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ | 950.00 | 518.92 | 85.90 | 224.08 | 828.90 | 607.53 | 221.37 |
| ರಾಷ್ಟ್ರೀಯ ಆಯುಷ್ ಅಭಿಯಾನ (2019-20ನೇ ಸಾಲಿನಿಂದ ಕೇ.ಪು.ಯೋ) | 2019-20 (ಜನವರಿ ಅಂತ್ಯಕ್ಕೆ) | 29.86 | 17.07 | 29.85 | 19.90 | 66.82 | 29.62 | 37.20 |

| 1. ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನದ ಬಗ್ಗೆ ಮಾಹಿತಿ (100%) | | | | | | | (ರೂ.ಕೋಟಿಗಳಲ್ಲಿ) |
|---|---|---|---|---|---|---|---|
| ಯೋಜನೆಯ ಹೆಸರು | ಅವಧಿ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಉಳಿಕೆಯಾದ ಅನುದಾನ | ಹಿಂದಿರುಗಿಸಿದ ಅನುದಾನ | ಅಗತ್ಯವಾದ ಹೆಚ್ಚಿನ ಅನುದಾನ | ಷರಾ |
| ಕುಟುಂಬ ಕಲ್ಯಾಣ | 2017-18 | 446.76 | 437.70 | 9.05 | 3.03 | - | |
| | 2018-19 | 508.68 | 500.77 | 7.91 | 1.88 | - | |
| | 2019-20 (ಜನವರಿ ಅಂತ್ಯಕ್ಕೆ) | 535.37 | 387.60 | 147.77 | - | - | |

*ಷರಾ : ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು 2019-20ನೇ ಸಾಲಿಗೆ ಸ್ಥಗಿತಗೊಂಡು ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ವಿಲೀನವಾಗಿರುತ್ತದೆ

# ಅನುಬಂಧ-2

| ಕ್ರ.ಸಂ. | ವಿವರ | ವರ್ಷ | ಮೊತ್ತ ರೂ. | ಷರಾ |
|---|---|---|---|---|
| 1 | ಡಾ॥ಶಿವನಾಗಪ್ಪ ಪಾಟೀಲ್, ವೈದ್ಯಾಧಿಕಾರಿ, ಪಿ.ಹೆಚ್.ಸಿ, ಚಿಮಚೋಡ್, ಚಿಂಚೋಳಿ ತಾ॥ ಕಲಬುರಗಿ ಜಿಲ್ಲೆ | 2018–19 | 27,82,460/- | ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದೆ. |
| 2 | ಡಾ॥ ರಾಜಕುಮಾರ್ ಯರಗಲ್, ಹಿಂದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ,ವಿಜಯಪುರ | 2017–18 | 23,92,000/- | ದೋಷಾ ರೋಪಣಾ ಪಟ್ಟಿ ಜಾರಿ ಮಾಡಲು ಕ್ರಮ ವಹಿಸಲಾಗುತ್ತಿದೆ. |